**ಓ.ಎಸ್. ನಂಃ 510/2013**

**ಡಿ.ಡಬ್ಲ್ಯೂಃ 1**

**ದಿನಾಂಕ 06.07.2024 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಃ ಶ್ರೀ ಹೆಚ್.ಕೆ.ಸಿ ವಕೀಲರಿಂದಃ**

1. ನನ್ನ ತಂದೆಯವರಿಗೆ ನಾವು ಒಟ್ಟು 6 ಜನ ಹೆಣ್ಣುಮಕ್ಕಳು. ನಾನು ನನ್ನ ತಂದೆತಾಯಿಗೆ 4 ನೇ ಮಗಳಾಗಿರುತ್ತೇನೆ. 1 ನೇ ವಾದಿ ಹಿರಿಯಮಗಳಾಗಿರುತ್ತಾಳೆ. 1 ನೇ ಪ್ರತಿವಾದಿಗೆ ಅಂದಾಜು 98 ವರ್ಷ ವಯಸ್ಸಾಗಿರುತ್ತದೆ. 1 ನೇ ಪ್ರತಿವಾದಿ ಮನೆಯಲ್ಲಿಯೇ ವಾಸವಿದ್ದಾರೆ. 1 ನೇ ಪ್ರತಿವಾದಿ ನನ್ನೊಂದಿಗೆ ಸಾಲಿಗ್ರಾಮದಲ್ಲಿ ವಾಸವಿದ್ದಾರೆ.

2. ಯಾವ ಕಾರಣಕ್ಕಾಗಿ ವಾದಿಯರು ಈ ದಾವೆಯನ್ನು ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದಿಯರು ಈ ದಾವೆಯನ್ನು ಹೂಡಿದ ವಿಷಯ ನಿಮಗೆ ಯಾವಾಗ ಗೊತ್ತಾಗಿರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು 1 ದಿನ ನಾನು ನನ್ನ ಕೆಲಸದ ನಿಮಿತ್ತ ನ್ಯಾಯಾಲಯಕ್ಕೆ ಬಂದಾಗ ವಾದಿಯರನ್ನು ನೋಡಿದ್ದು, ನ್ಯಾಯಾಲಯದಲ್ಲಿ ವಕೀಲರನ್ನು ವಿಚಾರಿಸಿದಾಗ ವಾದಿಯು ಈ ದಾವೆಯನ್ನು ಹೂಡಿದ ನನಗೆ ತಿಳಿದುಬಂದಿರುತ್ತದೆ. ನನ್ನ ಪ್ರತಿವಾದ ಪತ್ರವನ್ನು ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನನ್ನ ಮಾಹಿತಿಯ ಮೇರೆಗೆ ವಕೀಲರು ತಯಾರಿಸಿರುತ್ತಾರೆ.

3. ನನ್ನ ಗಂಡನ ಮನೆಯು ಕಿತ್ತೂರಿನ ಸಿಂಗ್ರಿಗೌಡನಕೊಪ್ಪಲಿನಲ್ಲಿ ಇರುತ್ತದೆ. ನನ್ನ ವಿವಾಹದ ಬಳಿಕ ನಾನು ನನ್ನ ಗಂಡನ ಮನೆಯಲ್ಲಿ ವಾಸವಿರಲಿಲ್ಲ ಬದಲಾಗಿ ನನ್ನ ತಂದೆ ತಾಯಿಯನ್ನು ನೋಡಿಕೊಂಡು ನನ್ನ ತವರು ಮನೆಯಲ್ಲಿಯೇ ವಾಸವಿರುತ್ತೇನೆ. ದಾವಾ ಆಸ್ತಿಗಳು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಎಂದು ತೋರಿಸಲು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಗಳನ್ನು 1 ನೇ ಪ್ರತಿವಾದಿ ಯಾವಾಗ ಖರೀದಿ ಮಾಡಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ ಆದರೆ ದಾವಾ ಆಸ್ತಿಗಳನ್ನೆಲ್ಲವೂ ಸಹ 1 ನೇ ಪ್ರತಿವಾದಿಯೇ ಖರೀದಿ

ಮಾಡಿದ್ದು, ದಾವಾ ಆಸ್ತಿಗಳೆಲ್ಲವೂ ಸಹ 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆ.

4. ದಾವಾ ಐಟಂ ನಂ.1 ರ ಆಸ್ತಿಯನ್ನು 1 ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದು ತೋರಿಸಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಐಟಂ ನಂ.1 ರ ಆಸ್ತಿಯನ್ನು 1 ನೇ ಪ್ರತಿವಾದಿಯು ಡೊಳ್ಳಯ್ಯ, ಕರಿಯಯ್ಯ, ಪೂಜಾರಿ ಕಾಳಯ್ಯ ಎನ್ನುವವರಿಂದ ಖರೀದಿ ಮಾಡಿರುತ್ತಾರೆ. ನಾವು ಸಣ್ಣವರಿದ್ದಾಗ ಕುಟುಂಬದೊಂದಿಗೆ ಸಾಲಿಗ್ರಾಮದ ಸಂತೆಬೀದಿಯಲ್ಲಿ ವಾಸ ಮಾಡುತ್ತಿದ್ದೇವು ಎಂದರೆ ಸರಿ.

5. ಲಕ್ಕೇಗೌಡರ ಮಗ ತಿಮ್ಮೇಗೌಡ @ ಹನುಮಂತೇಗೌಡ 1 ನೇ ಪ್ರತಿವಾದಿ ಎಂದರೆ ಸರಿ. ಜಮೀನನ್ನು ಖರೀದಿ ಮಾಡುವ ಉದ್ದೇಶದಿಂದ ದಿನಾಂಕ 22.02.1971 ರಂದು ಸಾಲಿಗ್ರಾಮದಲ್ಲಿದ್ದ ತಮ್ಮ ಮನೆಯನ್ನು 1 ನೇ ಪ್ರತಿವಾದಿಯು ಎಸ್.ಬಿ.ಪದ್ಮರಾಜು ಬಿನ್ ಧರಣಯ್ಯ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ.

6. ದಾವಾ ಐಟಂ ನಂ.5 ರ ಮನೆಯು ಸರ್ವೆ ನಂಬರ್ 19 ರಲ್ಲಿ ಕಟ್ಟಲಾಗಿದೆ. ಸರ್ವೆ ನಂಬರ್ 19 ರಲ್ಲಿ 4 ಗುಂಟೆ ಜಮೀನನ್ನು ಖರೀದಿ ಮಾಡಿ ದಾವಾ ಐಟಂ ನಂ.5 ರ ಮನೆಯನ್ನು ಕಟ್ಟಿಸಿರುತ್ತಾರೆ. 1 ನೇ ಪ್ರತಿವಾದಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಯನ್ನು ಮಾರಾಟ ಮಾಡಿ ಬಂದ ಹಣದಿಂದ ದಾವಾ ಐಟಂ ನಂ.5 ರ ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ತಮಗೆ ಸೇರಿದ ಮನೆಯನ್ನು 1 ನೇ ಪ್ರತಿವಾದಿ ನಿಪಿ.10 ರ ಮೂಖಾಂತರ ಕರಿನಾಯಕರವರ ಮಗ ರಾಮನಾಯಕರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ್ 19/2 ರ ಜಮೀನಿನಲ್ಲಿ ಮನೆಯನ್ನು ಕಟ್ಟಲು ಮತ್ತು ಎತ್ತಿನಗಾಡಿ ಖರೀದಿ ಮಾಡಲು ತಮ್ಮ ಮನೆಯನ್ನು ಮಾರಾಟ ಮಾಡುವುದಾಗಿ 1 ನೇ ಪ್ರತಿವಾದಿ ನಿಪಿ.10 ರಲ್ಲಿ ಬರೆಸಿರುತ್ತಾರೆ ಎಂದರೆ ಸರಿ.

7. ಜಮೀನುಗಳನ್ನು ಖರೀದಿ ಮಾಡುವ ಉದ್ದೇಶದಿಂದ ತಮಗೆ ಸೇರಿದ ಮನೆಯನ್ನು ಮಾರಾಟ ಮಾಡುತ್ತಿರುವುದಾಗಿ 1 ನೇ ಪ್ರತಿವಾದಿ ನಿಪಿ.9 ರ ಖರೀದಿ ಪತ್ರದಲ್ಲಿ ಬರೆಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳೆಲ್ಲವೂ ಸಹ 1 ನೇ

ಪ್ರತಿವಾದಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಗಳು ಎಂದರೆ ಸರಿಯಲ್ಲ. ತಮಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಗಳನ್ನೆಲ್ಲ ಮಾರಾಟ ಮಾಡಿ ಬಂದ ಆದಾಯದಿಂದ 1 ನೇ ಪ್ರತಿವಾದಿ ದಾವಾ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎಷ್ಟು ವರ್ಷಗಳಿಂದ ನೀವು ನಿಮ್ಮ ತಂದೆ ತಾಯಿಯನ್ನು ನೋಡಿಕೊಳ್ಳುತ್ತಿದ್ದೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ದಿನಾಂಕ 20.04.1997 ರಲ್ಲಿ ನನ್ನ ವಿವಾಹವಾಗಿದ್ದು, ನನ್ನ ವಿವಾಹದ ನಂತರ ನಾನು ಗಂಡನ ಮನೆಗೆ ಹೋಗದೆ, ನನ್ನ ತವರುಮನೆಯಲ್ಲಿಯೇ ಉಳಿದುಕೊಂಡು ನನ್ನ ತಂದೆ ತಾಯಿಯನ್ನು ನೋಡಿಕೊಂಡಿರುತ್ತೇನೆ ಎಂದು ಸಾಕ್ಷಿಯು ನುಡಿದಿರುತ್ತಾರೆ.

8. ನನ್ನ ವಿವಾಹ ಮಾಡಿಕೊಡುವಾಗ ನನ್ನ ತಂದೆ ತಾಯಿ ಆರೋಗ್ಯವಂತರಾಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆ ತಾಯಿಯ ಆರೋಗ್ಯ ಅಷ್ಟೊಂದು ಚೆನ್ನಾಗಿರಲಿಲ್ಲ ಎಂದು ನುಡಿದಿರುತ್ತಾರೆ. ವಾದಿಯರು ನನ್ನ ಹಿರಿಯ ಸಹೋದರರಿಯರಾಗಿದ್ದು ಅವರು ಮತ್ತು 1 ನೇ ಹಾಗೂ 6 ನೇ ಪ್ರತಿವಾದಿಯರು ಸೇರಿ ನನ್ನ ವಿವಾಹವನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಕ್ಕಳ ನಾಮಕರಣದ ಕಾರ್ಯಕ್ರಮವನ್ನು ವಾದಿಯರೇ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ವಾದಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**